**<u>ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ,</u>** <u>ದೇವದುರ್ಗ.</u>

**ಉಪಸ್ಥಿತರು ಃ ಶ್ರೀ. ರಫೀಕ್** ಅಹಮದ್ **ಬಿಎ., ಎಲ್.ಎಲ್.ಬಿ**
**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,** ದೇವದುರ್ಗ
**<u>ದಿನಾಂಕ ಃ 09 ನೇ ಜೂನ್ 2026</u>**

**<u>ಕ್ರಿಮಿನಲ್. ಮಿಸ್. ನಂ.792/2026</u>**

ರವಿನಾ ತಂದೆ ಅಮರೇಶ, ವಯಸ್ಸು **೧೩** ವರ್ಷ, ತಾಯಿಃ ಮೀನಾಕ್ಷಿ,
ನೈಸರ್ಗಿಕ ಪೋಷಕರಾದ ಅಮರಪ್ಪ ತಂದೆ ರಂಗಣ್ಣ ಕುಪಗಲ್.
ವಯಸ್ಸು **೪೩** ವರ್ಷ, ಉಃ ಒಕ್ಕಲುತನ,
ಅರ್ಜಿದಾರರ ವಾಸಃ- ಕೆ. ಇರಬಗೇರಾ ಗ್ರಾಮ,
ತಾಃ ದೇವದುರ್ಗ, ರಾಯಚೂರು ಜಿಲ್ಲೆ.

**..........**ಅರ್ಜಿದಾರರು
**(**ಶ್ರೀ ಎಸ್.ಪಿ**, ವಕೀಲರಿಂದ)**

**ಃಃವಿರುದ್ಧಃಃ**

ಜನನ-ಮರಣ ನೋಂದಣಾಧಿಕಾರಿಗಳು,
ದೇವದುರ್ಗ ತಾಲ್ಲೂಕು.
ದೇವದುರ್ಗ ತಾ||, ರಾಯಚೂರು ಜಿಲ್ಲೆ.

**_.ಎದುರುದಾರರು**
**(ಏಕತರ್ಫಿ)**

**ಃಃತೀರ್ಪುಃಃ**

**ಅರ್ಜಿದಾರು ಅರ್ಜಿಯನ್ನು ಜನನ ಹಾಗೂ ಮರಣ ನೋದಣಿ ಕಾಯಿದೆ ಕಲಂ ೧೩(೩) ರ ಅಡಿಯಲ್ಲಿ ಸಲ್ಲಿಸಿರುತ್ತಾರೆ.**

**೨. <u>ಅರ್ಜಿಯ ಸಾರಾಂಶ ಈ ಕೆಳಕಂಡಂತೆಃ-</u>**

ಅರ್ಜಿದಾರರ ಮಗಳಾದ ರವಿನಾ ತಂದೆ ಅಮರೇಶ ಇವರು ದಿನಾಂಕಃ 10-08-2012 ರಂದು ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕು, ಕೆ. ಇರಬಗೇರಾ ಗ್ರಾಮದಲ್ಲಿ ಜನಿಸಿರುತ್ತಾಳೆ. ಈ ಬಗ್ಗೆ ಎದರುದಾರ ಕಚೇರಿಯಲ್ಲಿನ ಜನನ ಮತ್ತು ಮರಣಗಳ ನೋದಣಿ ರಿಜಿಸ್ಟರ್ ನಲ್ಲಿ ಮಾಹಿತಿ ದಾಖಲಾಗಿರುವುದಿಲ್ಲ. ಅರ್ಜಿದಾರರಿಗೆ ಸರಿಯಾದ ಮಾಹಿತಿ ಇಲ್ಲದ ಕಾರಣ ತನ್ನ ಮಗಳ ಜನನದ ವಿಷಯವನ್ನು ಸಮಕ್ಷಮ ಅವಧಿಯಲ್ಲಿ ಎದುರುದಾರರಿಗೆ ತಿಳಿಸಿರುವುದಿಲ್ಲ. ಈ ಕಾರಣಕ್ಕಾಗಿ ಅರ್ಜಿದಾರರ ಮಗಳ ಜನನದ ದಾಖಲೆಗಳು ಲಭ್ಯವಿರುವುದಿಲ್ಲ. ಇತ್ತೀಚಿಗೆ ಅರ್ಜಿದಾರರಿಗೆ ತನ್ನ ಮಗಳ ಜನನ ಪ್ರಮಾಣ ಪತ್ರವು ಆಧಾರ್ ಕಾರ್ಡ್ ಮಾಡಿಸುವ ಸಲುವಾಗಿ ಹಾಗೂ ವಿದ್ಯಾಭ್ಯಾಸದ ಉದ್ದೇಶಕ್ಕಾಗಿ

ಮತ್ತು ಇನ್ನಿತರ ಕಾರ್ಯಕ್ಕಾಗಿ ಅವಶ್ಯಕತೆ ಇರುವುದಾಗಿ ಎದುರುದಾರರಿಗೆ ಅರ್ಜಿಯನ್ನು ಸಲ್ಲಿಸಿದ್ದು, ಎದರುದಾರರು ತಮ್ಮ ದಾಖಲೆಗಳಲ್ಲಿ ಅರ್ಜಿದಾರರ ಮಗಳ ಜನನದ ಪ್ರಮಾಣ ಪತ್ರ ನೀಡುವಂತೆ ಆದೇಶಿಸಬೇಕೆಂದು ಅರ್ಜಿದಾರರು ವಿನಂತಿಸಿರುತ್ತಾರೆ.

**2.** ಅರ್ಜಿದಾರರು ಸಲ್ಲಿಸಿದ ಅರ್ಜಿಯ ನೋಟಿಸನ್ನು ಎದುರುದಾರಿಗೆ ಜಾರಿಮಾಡಲಾಯಿತು. ಸದರಿ ನೋಟಿಸು ಎದುರುದಾರರಿಗೆ ಜಾರಿಯಾಗಿದ್ದು, ಎದುರುದಾರರು ನ್ಯಾಯಾಲಯಕ್ಕೆ ಹಾಜರಾಗಲು ನಿಗದಿಪಡಿಸಿದ ದಿನದಂದು ಹಾಜರಾಗದೇ ಗೈರುಹಾಜರಾಗಿರುತ್ತಾರೆ. ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಅರ್ಜಿದಾರರು ಅ.ಸಾ-1 ಎಂದು ವಿಚಾರಣೆ ಮಾಡಿಕೊಂಡು, ನಿಪಿ-1 ರಿಂದ 5 ರ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

**3.** ಈ ಮೇಲಿನ ವಿಧ್ಯಮಾನಗಳ ಆಧಾರದ ಮೇಲಿಂದ ನನ್ನ ಗಣನೆಗೆ ಉದ್ಭವಿಸುವ ಅಂಶವೇನೆಂದರೆಃ

**1)** ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲು ಯೋಗ್ಯವಾಗಿದೆಯೇ **?**

**4.** ಈ ಮುಂದೆ ವಿವರಿಸಿದ ಕಾರಣಗಳಿಗಾಗಿ ಈ ಮೇಲಿನ ಅಂಶವನ್ನು ಸಕಾರಾತ್ಮಕವಾಗಿ ಉತ್ತರಿಸಲಾಯಿತ್ತು.

**ಃಃ ಕಾರಣಗಳುಃಃ**

**5.** ಅರ್ಜಿದಾರರ ಅರ್ಜಿಯಲ್ಲಿನ ಅಂಶಗಳು ಹಾಗೂ ಅ.ಸಾ-1 ರವರ ಮೌಖಿಕ ಸಾಕ್ಷ್ಯ ಮತ್ತು ನಿ.ಪಿ-1 ರಿಂದ 5ರ ದಾಖಲೆಗಳ ಪರಿಶೀಲನೆಯಿಂದ ಸ್ಪಷ್ಟವಾಗುವ ಅರ್ಜಿದಾರರ ಮಗಳಾದ ರವಿನಾ ತಂದೆ ಅಮರೇಶ ಇವರು ದಿನಾಂಕಃ 10-08-2012 ರಂದು ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕು, ಕೆ. ಇರಬಗೇರಾ ಗ್ರಾಮದಲ್ಲಿ ಜನಿಸಿರುತ್ತಾಳೆ. ಹಾಗೂ ಸದರಿಯವರ ಜನನದ ದಾಖಲೆಗಳು ಎದುರುದಾರರ ಕಚೇರಿಯಲ್ಲಿ ಲಭ್ಯವಿರುವುದಿಲ್ಲ. ಎದುರುದಾರರಿಗೆ ಈ ಅರ್ಜಿಯ ನೋಟಿಸ್ ಜಾರಿಯಾಗಿದ್ದರೂ, ಈ ಪ್ರಕರಣದಲ್ಲಿ ಹಾಜರಾಗಿರುವುದಿಲ್ಲ ಆದ್ದರಿಂದ ಅರ್ಜಿದಾರರ ಅರ್ಜಿಯಲ್ಲಿನ ವಿಷಯಗಳು ಅವಿರೋಧವಾಗಿ ಉಳಿದಿರುತ್ತವೆ. ಆದ್ದರಿಂದ ಅರ್ಜಿದಾರರ ಪ್ರಕರಣ ಸ್ವೀಕಾರಾರ್ಹವಾಗಿದೆ ಎಂದು ಈ ನ್ಯಾಯಾಲಯ ಅಭಿಪ್ರಾಯಪಟ್ಟಿರುತ್ತದೆ. ಈ ಕಾರಣಗಳಿಗಾಗಿ ಮೇಲಿನ ಅಂಶಗಳನ್ನು ಸಕಾರಾತ್ಮಕವಾಗಿ ಉತ್ತರಿಸಲಾಯಿತು. ಈ ಕೆಳಗಿನಂತೆ ಆದೇಶ.

**:: ಆದೇಶ ::**

ಅರ್ಜಿದಾರರು ಜನನ ಹಾಗೂ ಮರಣ ನೋಂದಣಿ ಕಾಯಿದೆ ಕಲಂ **೧೩(೩)** ರಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲಾಯಿತು. ಅರ್ಜಿದಾರರ ಮಗಳಾದ ರವಿನಾ ತಂದೆ ಅಮರೇಶ ಇವರು ದಿನಾಂಕಃ **10-08-2012** ರಂದು ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕು, ಕೆ. ಇರಬಗೇರಾ ಗ್ರಾಮದಲ್ಲಿ ಜನಿಸಿರುತ್ತಾಳೆ. ಸದರಿಯವರ ಜನನ ದಿನಾಂಕವನ್ನು ಜನನ ನೋಂದಣಿ ರಿಜಿಸ್ಟ್ರರನಲ್ಲಿ ನೋದಾಯಿಸಿಕೊಂಡು ಜನನದ ಪ್ರಮಾಣ ಪತ್ರವನ್ನು ಅರ್ಜಿದಾರರಿಗೆ ನೀಡಬೇಕೆಂದು ಎದುರುದಾರರಿಗೆ ನಿರ್ದೇಶಿಸಲಾಗಿದೆ.

ಅಗತ್ಯ ಶುಲ್ಕವನ್ನು ಅರ್ಜಿದಾರರು ಭರಿಸತಕ್ಕದ್ದು.

(ಗಣಕಯಂತ್ರದಲ್ಲಿ ನೇರವಾಗಿ ಉಕ್ತಲೇಖನವನ್ನು ಶೀಘ್ರಲಿಪಿಗಾರರಿಗೆ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಿದ್ದಿ, ಸಹಿ, ಮಾಡಿ ನಂತರ ಇಂದು ದಿನಾಂಕ 09-06-2026 ರಂದು ಮುಕ್ತ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು)

ಸಹಿ/-
(ಶ್ರೀ ರಫೀಕ್ ಅಹಮದ್)
**ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.,**
ದೇವದುರ್ಗ.

**:: ಅನುಬಂಧ ::**

**ಅರ್ಜಿದಾರರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು ಃ**

**ಅ.ಸಾ ಃ ೧** ರವಿನಾ ತಂದೆ ಅಮರೇಶ.

**ಅರ್ಜಿದಾರರ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳು ಃ**

**ನಿಪಿ ಃ ೧** ಅಲಭ್ಯ ಪ್ರಮಾಣ ಪತ್ರ.

**ನಿಪಿ ಃ ೨** ಶಾಲಾ ದೃಢೀಕರಣ ಪತ್ರ.

**ನಿಪಿ ಃ ೩** ರಿಂದ **೫** ಆಧಾರಕಾರ್ಡ್ ದೃಢೀಕೃತ ಪ್ರತಿಗಳು.

**ಎದುರುದಾರರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು ಃ**

**-----ಇಲ್ಲ----**

**ಎದುರುದಾರರ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳು ಃ**

**-----ಇಲ್ಲ------**

ಸಹಿ/-
(ಶ್ರೀ ರಫೀಕ್ ಅಹಮದ್)
**ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.,**
ದೇವದುರ್ಗ.